# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.36/2014**

**ದೋ.ಸಾ. : 19 ಫ್ರಾ.ಸಾ. : 13**

ಸಾಕ್ಷಿಯ ಹೆಸರು : ಜಯಮ್ಮ ಗೋವೀಂದರಾಜ
ಗಂಡನ ಹೆಸರು : ಗೋವೀಂದರಾಜ
ವಯಸ್ಸು : 75 ವರ್ಷ
ಕೆಲಸ : ಗೃಹಿಣಿ
ವಾಸ : ರಾಜೀವನಗರ, ಕದ್ರಾ

**ದಿನಾಂಕಃ 03-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2014 ನೇ ಇಸ್ವಿಯಲ್ಲಿ ಕದ್ರಾ ಪೊಲೀಸರು ನನ್ನನ್ನು ಪಂಚನಾಮೆಗಾಗಿ ಠಾಣೆಗೆ ಕರೆಸಿದ್ದರು. ಆ ಸಮಯದಲ್ಲಿ ಠಾಣೆಯಲ್ಲಿ ಚಾಸಾ-18 ರವರ ಸಹ ಇದ್ದರು. ಅಲ್ಲಿ ಪೊಲೀಸರು ಮೃತ ವೇಲು ಇಲ್ಲನ್ ಗುಡಿಯ ಹೆಂಡತಿಯಾದ ಚಾಸಾ-22 ರವರ ಬಟ್ಟೆಗಳನ್ನು ತಂದು ಹಾಜರಪಡಿಸಿದ್ದು, ಅವುಗಳಲ್ಲಿ ಒಂದು ಹಸಿರು ಬಣ್ಣದ ಸ್ವೆಟರ್, ಒಂದು ಗುಲಾಬಿ ಬಣ್ಣದ ಸೀರೆ, ಒಂದು ಲಂಗ ಹಾಗೂ ಒಂದು ಬ್ಲೌಸ್ ಇರುತ್ತವೆ ಹಾಗೂ ಸದರಿ ಬಟ್ಟೆಗಳಿಗೆ ರಕ್ತದ ಕಲೆ ಇರುತ್ತದೆ. ಅವುಗಳನ್ನು ಪೊಲೀಸರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಜಪ್ತು ಪಂಚನಾಮೆಯನ್ನು ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಜಪ್ತು ಪಂಚನಾಮೆಯನ್ನು ಮದ್ಯಾಹ್ನದ ಸಮಯದಲ್ಲಿ ಮಾಡಿರುತ್ತಾರೆ. ಸದರಿ ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-45 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-45(ಬಿ) ಎಂದು ಗುರುತಿಸಲಾಯಿತು.

2. ಅದೇ ರೀತಿ ಸಾಕ್ಷಿಯು ಚಾಸಾ-22 ಜಾನಕಿಯವರ ಬಟ್ಟೆಗಳಾದ ಸ್ವೆಟರ್, ಸೀರೆ, ಲಂಗ ಮತ್ತು ಬ್ಲೌಸ್ ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-30 ರಿಂದ 33 ಎಂದು ಗುರುತಿಸಲಾಗಿದ್ದು, ಮುದ್ದೆ ಮಾಲು-31 ರಿಂದ 33 ರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-31(ಬಿ) ರಿಂದ 33(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ  ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

3. ನನಗೆ ಓದಲು–ಬರೆಯಲು ಬರುವುದಿಲ್ಲ ಎಂದರೆ ಸರಿ. ನಿಪಿ–45 ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–45 ಜಪ್ತು ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಹಾಗೂ ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ.  ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು–30 ರಿಂದ 33 ರನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಮುದ್ದೆ ಮಾಲುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಸಹಿಯನ್ನಷ್ಟೇ ಪಡೆದರು ಎಂದು ನುಡಿಯುತ್ತಾರೆ. ಪಂಚನಾಮೆ ಹಾಗೂ ಮುದ್ದೆ ಮಾಲುಗಳನ್ನು ಪೊಲೀಸರು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ